ಇನ್ನೊಂದೆರೆಡು ದಿವ್ಸ ಇದ್ದು ಎಲ್ಲಾ ಮುಗಿಸಿಕೊಂಡ ಹೋಗ್ತೇವಿ" ಎಂದೇ ಪಟ್ಟು ಹಿಡಿದರು. ಅಪ್ಪ "ಗುರಣ್ಣಾ..." ಎಂದಾಗ ಕಾಕಾ ಮಾತನಾಡಲೇ ಇಲ್ಲ. ತಕ್ಷಣ ಊರ ಮುಖಂಡರನ್ನು ಕರೆಸಿ ಪಂಚಾಯ್ತಿ ಸೇರಿಸಿ ಹೊಲ, ಮನೆಗೆ ದರ ನಿಗದಿ ಪಡಿಸಿದಾಗಲೇ ಅವರು ಸುಮ್ಮನಾದದ್ದು. ತಮ್ಮ ಪಾಲಿಗೆ ಬಂದ ಐದೆಕರೆ ಹೊಲವನ್ನು ಕಾಕಾ ಬೇಡವೆನ್ನುತ್ತಿದ್ದರೂ ಕೇಳದೇ ಗೌಡರಿಗೆ ಮಾರಿಯೇ ಬಿಟ್ಟರು. ಮನೆಯ ಮಾತು ಬಂದಾಗ ಮಾತ್ರ ಅಪ್ಪ, "ಹಿರೀಕರು ಬಾಳಿ ಬದುಕಿದ ಮನಿ. ಯಾರಿಗೋ ಮಾರಬ್ಯಾಡ್ರಿ ವೈನಿ. ನಾನ ತೊಗೋತೇನಿ" ಎಂದು ಅವ್ವನ ತೌರಿನ ಏಕೈಕ ಒಡವೆಯಾದ ಅಡ್ಡಿಕೆ ಸರವನ್ನು ಮುಂದಿಟ್ಟಿದ್ದ. ದುಡ್ಡನ್ನೆಲ್ಲ ಸರಿಯಾಗಿ ಲೆಕ್ಕ ಹಾಕಿ ಸರದೊಡನೆ ಆ ವರ್ಷದ ದವಸ, ಧಾನ್ಯಗಳನ್ನು ಹೇರಿಕೊಂಡೇ ಅವರು ಊರು ಬಿಟ್ಟಿದ್ದು. ಕಾಕಾ ಹತಾಶರಾಗಿ ನಿಟ್ಟುಸಿರು ಬಿಟ್ಟ ಕ್ಷಣ ಇನ್ನೂ ಚೆನ್ನಾಗಿ ನೆನಪಿದೆ. ನಮ್ಮವರೆನಿಸಿಕೊಂಡ ನೆಂಟರು ಎದೆಯ ಮೇಲೆ ನಿಂತು ಪಾಲು ಮಾಡಿ, ವಸೂಲಿ ಮಾಡಿಕೊಂಡು ಹೋಗಿದ್ದು ನೋಡಿ ಹನ್ನೆರಡರ ಹುಡುಗನಾಗಿದ್ದ ನನ್ನ ಎದೆ ಉರಿದಿತ್ತು. ಆದರೆ ಏನೂ ಮಾಡುವ ಹಾಗಿರಲಿಲ್ಲ. ನುಗ್ಗಿ ಬರುವ ನೆನಪುಗಳನ್ನು ಮೆಜೆಸ್ಟಿಕ್‌ನಲ್ಲಿ ಟ್ರಾಫಿಕ್ ಪೊಲೀಸನ ಸೀಟಿ ತಡೆದಿತ್ತು. ಅವನ ಕೈಯಲ್ಲಿದ್ದ ಯಂತ್ರಕ್ಕೆ "ಉಫ್"ಎಂದು ಊದಿದಾಗ ಡ್ರಂಕನ್ ಡ್ರೈವಿಂಗ್ ಅಲ್ಲವೆಂದು ಖಚಿತಪಡಿಸಿಕೊಂಡವ ತಾನೇ ಸ್ವತಃ ಕುಡಿದು ನಿಂತಿದ್ದು ನಮ್ಮ ಸಮಾಜದ ಪರಿಸ್ಥಿತಿಗೆ ಕನ್ನಡಿ ಹಿಡಿದ ಹಾಗಿತ್ತು. ವ್ಯಂಗ್ಯವಾಗಿ ನಕ್ಕು ಮುಂದೆ ಸಾಗಿದೆ.

ಯಮುನಾಳ ಮದುವೆ ಗೊತ್ತಾಯಿತು. ನಮ್ಮ ಹಣಕಾಸಿನ ಪರಿಸ್ಥಿತಿ ಕಠಿಣವಾಗಿತ್ತು. ಐದೆಕರೆ ಹೊಲದಿಂದ ಬರುವ ಆದಾಯ ಹೊಟ್ಟೆಗಷ್ಟೇ ಸಾಕಾಗುತ್ತಿತ್ತು. ಬಟ್ಟೆಗೂ ತತ್ವಾರವೇ. ಅವ್ವ ತನ್ನ ಎರಡೆಳೆ ಸರವನ್ನು ಮಾರಿ ಮಗಳಿಗೆ ಮಾಂಗಲ್ಯ ಮಾಡಿಸಿದಳು. ಅಪ್ಪ ಎಲ್ಲಿಯೋ ಸಾಲ ಹುಟ್ಟಿಸಿ ಮಗಳಿಗೆ ಸರಳವಾಗೇ ಮದುವೆ ಮಾಡಿದ. ಕಾಕಾ, ಕಾಕು ಮದುವೆಗೆ ಬಂದು ತೀರ ಹೊರಗಿನವರಂತೆ ಅವ್ವನಿಗೆ, ಅಕ್ಕನಿಗೆ ಸುಮಾರಾದ ಸೀರೆಗಳನ್ನು ಕೊಟ್ಟು ಅಪ್ಪನಿಗೊಂದು ಶರ್ಟ್ ಪೀಸು ಕೊಟ್ಟು ಕೈತೊಳೆದುಕೊಂಡಾಗ ಅವ್ವನ ಕಣ್ಣಲ್ಲಿ ಸಣ್ಣಗೆ ನೀರು ಜಿನುಗಿತ್ತು. ಗುರು ಕಾಕಾ ಯಾರೂ ಇಲ್ಲದಾಗ, "ವಿಠೂ... ನಿನಗ ಎಷ್ಟ ತ್ರಾಸದ ಅಂತ ಗೊತ್ತದನಪಾ. ಆದರ ನಾನೂ ಹೆಲ್ಪ್‌ಲೆಸ್ ಆಗೀನಿ. ಇವಿಷ್ಟು ಇಟಗೋ" ಎಂದು ಕೆಲವು ನೋಟುಗಳನ್ನು ಅಪ್ಪನ ಕೈಗೆ ಬೇಡವೆಂದರೂ ತುರುಕಿದ್ದನ್ನು ಮರೆಯಲಾಗುವುದಿಲ್ಲ.

ಮುಂದೆ ನನ್ನ ವಿದ್ಯಾಭ್ಯಾಸದ ವಿಷಯ ಬಂದಾಗ ಕಾಕಾ ಧೈರ್ಯ ಮಾಡಿದ್ದರು. "ಹುಡುಗ ಶಾಣ್ಯಾ ಇದ್ದಾನ. ಹತ್ತನೇತ್ತಾಕ್ಕ ತೊಂಬತ್ತೆರಡು ಪರಸೆಂಟು ತೊಗೊಂಡು ಜಿಲ್ಲಾಕ್ಕ ಮೊದಲನೇ ನಂಬರ್ ಬಂದಾನ. ಬೇಕಾದಲ್ಲೆ ಎಡ್ಮಿಷನ್ ಸಿಗ್ತದ. ಹಳ್ಳ್ಯಾಗ ಕೂಡಸಬ್ಯಾಡ. ನಮ್ಮ ಕಡೆ ಕಳಸು. ಮುಂದ ಛೋಲೊ ಓದಲಿ" ಎಂದಿದ್ದರು. ಮನೆಯ ಪರಿಸ್ಥಿತಿಯ ಬಗ್ಗೆ ಅರಿವಿದ್ದ ನಾನು, "ಡಿಪ್ಲೊಮಾನ ಸಾಕು" ಎಂದಿದ್ದೆ. ಅಕ್ಕನ ಮದುವೆಯ ಸಾಲವೇ ಇನ್ನೂ ತೀರಿರಲಿಲ್ಲ. ಮರುವರ್ಷ ಅವಳ ಬಾಣಂತನದ ಖರ್ಚೂ ಸೇರಿ ನನಗೆ ಸೋದರಳಿಯ ಬಂದಿದ್ದ. ಮಳೆ, ಬೆಳೆಗಳು ಕೈಕೊಡುವದಂತೂ ಸಾಮಾನ್ಯ ಸಂಗತಿ. ಎಲ್ಲದರ ಮಧ್ಯೆಯೇ ಅಪ್ಪ ನನ್ನ ಫೀಸಿನ ಹಣ ಹೇಗೋ ಹೊಂದಿಸಿ ಕಾಕೂನ ಕೈಗೆ ಕೊಟ್ಟಿದ್ದ. "ಬ್ಯಾಡೋ... ನಾ ಎಲ್ಲಾ ನೋಡ್ಕೋತೇನಿ" ಎಂದ ಕಾಕಾ ಹೆಂಡತಿಯ ಕೆಂಗಣ್ಣಿಗೆ ಹೆದರಿದ್ದ. ಮುಗುಳ್ನಗುತ್ತ ಕಾಕು ಅದನ್ನು ಪರ್ಸಿಗೆ ಸೇರಿಸಿಕೊಂಡ ಚಿತ್ರ ಇನ್ನೂ ಕಣ್ಣಿನಿಂದ ಮರೆಯಾಗಿಲ್ಲ. ಅಂತೂ ಅವ್ವನ ಸೆರಗು ಬಿಟ್ಟು ಬೆಂಗಳೂರು ಸೇರಿದ್ದೆ.